ಮಾಹಿತಿ ಹಕ್ಕು ಅಧಿನಿಯಮ 6(1) ಮತ್ತು 7(1) 2005 ರಡಿಯಲ್ಲಿ ಮಾಹಿತಿಯನ್ನು ಕೋರುವ ಬಗ್ಗೆ

# FORM OF APPLICATION FOR SEEKING INFORMATION UNDER 6(1) AND7(1) THE RIGHT TO INFORMATION ACT-2005

TO/ಇವರಿಗೆ,

**The Public Information Officer / ಸಾರ್ವಜನಿಕ ಮಾಹಿತಿ ಅಧಿಕಾರಿ.**

ನಿರ್ದೇಶಕರು
ಪವರ್ ಗ್ರಿಡ್
400/220 KV ಉಪಕೇಂದ್ರ
ದೊಡ್ಡಗೇಣಿಗೆರೆ ಪೋಸ್ಟ್, NH-75
ಗಾಡೇನಹಳ್ಳಿ ಕ್ರಾಸ್, ಹಾಸನ - 573220

| | | |
|---|---|---|
| 01. | Name of the Applicant/ ಅರ್ಜಿದಾರರ ಹೆಸರು | ಗೋಪಾಲಕೃಷ್ಣ |
| 02. | Complete Address/ಪೂರ್ಣ ವಿಳಾಸ | s/o ಕೃಷ್ಣಪ್ಪ ಉ ರಾಜಪ್ಪ<br>ಮಾರಿಗುಡಿ ಬೀದಿ, ಶಾಂತಿಗ್ರಾಮ ಹೋ.<br>ಹಾಸನ |
| 03. | Contact No/ದೂರವಾಣಿ ಸಂಖ್ಯೆ<br>Mob No/ಮೊಬೈಲ್ | 8792521997 |
| 04. | (a) Particulars of the information, documents, inpsection, sample required/ಕೋರಿರುವ ಮಾಹಿತಿಯ ದಸ್ತಾವೇಜಿನ, ತಪಾಸಣೆಯ ಹಾಗೂ ನಮೂನೆಯ ವಿವರಗಳು<br>b) Period to which the above pertains/ ಯಾವ ಅವಧಿಗೆ ಮೇಲ್ಕಂಡ ವಿಷಯವು ಸಂಬಂಧಿಸಿದೆ<br>c) Other details (any)/ ಇತರೆ ವಿವರಗಳು (ಇದ್ದರೆ) | ⓐ ತಮ್ಮ ಉಲ್ಲೇಖ ಪತ್ರ SR-II/HSNTLMF-886 ದಿ-21/7/21 ರಂತೆ ಹೆಗ್ಗಡಿಹಳ್ಳಿ ಗ್ರಾಮ ಹತ್ತಿರದ ಸ.ನಂ 41 Pರಲ್ಲಿ ದಿ-30/5/2010 ರಂದೆ ಲೈನ್ ಚಾರ್ಜ್ ಮಾಡಲಾಗಿದೆ ಎಂದು ತಿಳಿಸಿರುತ್ತೀರಿ.<br>"ತಾವು ಹಾಕಿರುವ ಹೈಟೆನ್ಷನ್ ವೈರ್ ಹಾದು ಹೋಗಿರುವ ಸ.ನಂ 41P ರಲ್ಲಿ ಯಾರಿಗೆ ಪರಿಹಾರ ನೀಡಿರುತ್ತೀರಿ. ಎಷ್ಟು ಮೊತ್ತ ಪಾವತಿ ನೀಡಿರುತ್ತೀರಿ, ಲೈನ್ ಹಾಕುವ ಮುನ್ನ ಯಾರಿಗೆ ನೋಟಿಸ್ ನೀಡಿರುತ್ತೀರಿ, ಹಾಗೂ ಲೈನ್ ಕೆಲಸ ಮಾಡಿರುವ ಗುತ್ತಿಗೆದಾರರ ಪೂರ್ತಿ ಮಾಹಿತಿಯನ್ನು, ಈ ಮೇಲ್ಕಂಡ ಪೂರ್ಣ ಮಾಹಿತಿಯನ್ನು ದಾಖಲೆ ಸಮೇತವಾಗಿ ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.<br>ⓑ 2000 ರಿಂದ 2021 ರವರೆಗೆ.<br>ⓒ SR-II/HSN/TLM/F-886 ದಿನಾಂಕ-21/7/2021 ರ ಪತ್ರವನ್ನು ಲಗತ್ತಿಸುತ್ತೇನೆ. |
| 05. | Details of Application Fee of Rs. 10 (Rupees ten only) remitted/ ಪಾವತಿಸಿದ ಅರ್ಜಿಯ ಶುಲ್ಕದ ವಿವರ ರೂ. 10/- (ಹತ್ತು ರೂ. ಗಳು) ಪಾವತಿಸಿದೆ | Indian Postal Order/DD/ Banker's Cheque No. and date, Cash receipt No. & date (if remited by cash)/ ಇಂಡಿಯನ್ ಪೋಸ್ಟಲ್ ಆರ್ಡರ್/ಡಿಡಿ/ಬ್ಯಾಂಕರ್ಸ್ ಚೆಕ್ ಸಂಖ್ಯೆ ಹಾಗೂ ದಿನಾಂಕ, ನಗದು ರಶೀದಿ ನಂ. ಮತ್ತು ದಿನಾಂಕ (ನಗದಾಗಿ ಪಾವತಿಸಿದರೆ ಮಾತ್ರ) 50F 441946, 25/11/2021 |

पावरग्रिड POWERGRID
01 DEC 2021
जावक / OUTWARD
हासन / Hassan. No. 9150673

पावरग्रिड POWERGRID
30 NOV 2021
आवक / INWARD
हासन / Hassan. No. 2132675

Place/ ಸ್ಥಳ : ~~ಬೆಂಗಳೂರು~~ ಶಾಂತಿಗ್ರಾಮ, ಹಾಸನ

Date/ ದಿನಾಂಕ : 25/11/2021

Signature of the Applicant/ಅರ್ಜಿದಾರರ ಸಹಿ (ಗೋಪಾಲಕೃಷ್ಣ)

→ DM(TLM)
For necessary action
30.11.21

# ಪವರ್ ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್

(ಭಾರತ ಸರ್ಕಾರದ ಉದ್ಯಮ)

पावरग्रिड

400/220 kV ಉಪ ಕೇಂದ್ರ, ದೊಡ್ಡಗೇಣಿಗೆರೆ ಪೋಸ್ಟ್, N H -75, ಗಾಡೇನಹಳ್ಳಿ ಕ್ರಾಸ್, ಹಾಸನ - 573220

Ref: SR-II/HSN/TLM/F-886

ದಿನಾಂಕ: 21.07.2021

पावरग्रिड POWERGRID
21 JUL 2021
जावक / OUTWARD
हासन / Hassan, No. 0029981

ಗೆ
ಶ್ರೀ ಗೋಪಾಲ ಕೃಷ್ಣ, S/o ರಾಜಪ್ಪ
ಶಾಂತಿಗ್ರಾಮ
ಮಾರಿಗುಡಿ ಬೀದಿ,
ಹಾಸನ ತಾಲ್ಲೂಕು,
ಹಾಸನ ಜಿಲ್ಲೆ.

ಮಾನ್ಯರೆ

ಉಲ್ಲೇಖ : ಮಾಹಿತಿ ಹಕ್ಕು – 2005 ರ ಅಡಿಯಲ್ಲಿ ತಾವು ಮಾಹಿತಿ ಕೇಳಿರುವ ಅರ್ಜಿಯ ದಿನಾಂಕ - 12.07.2021

ವಿಷಯ : ತಮ್ಮ ಜಮೀನಿನ ಮೇಲೆ ಪವರ್ ಗ್ರಿಡ್ ನ ತಾಳಗುಪ್ಪ – ನೆಲಮಂಗಲ ಲಿಲೊ 400 kV ಲೈನು ಹಾದು ಹೋಗಿದ್ದು ತಾವು ಮಾಹಿತಿ ಹಕ್ಕಿನಲ್ಲಿ ಕೇಳಿರುವ ಮಾಹಿತಿನ್ನು ಕುರಿತು

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಹಾಸನ ತಾಲ್ಲೂಕು, ಹಗ್ಗದಿಹಳ್ಳಿ ಗ್ರಾಮದ ಹತ್ತಿರ ಇರುವ ತಮ್ಮ ಜಮೀನಿನ ಮೇಲೆ(ಸರ್ವೆ ನಂಬರ್ – 41/ಪಿ) ಪವರ್ ಗ್ರಿಡ್ ವ್ಯಾಪ್ತಿಗೆ ಬರುವ ತಾಳಗುಪ್ಪ – ನೆಲಮಂಗಲ ಲಿಲೊ 400 kV ಲೈನು ಹಾದು ಹೋಗಿದ್ದು ಇದಕ್ಕೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಪ್ರಶ್ನೆಗಳನ್ನು ಮಾಡಿರುತ್ತೀರಿ.

1) ನಮ್ಮ ಜಮೀನಿನ ಮೇಲೆ ಹೈಟೆನ್ಷನ್ ಲೈನು ಹಾದು ಹೋಗಿದ್ದು ನಮಗೆ ಯಾವುದೇ ನೋಟಿಸ್ ಅಥವಾ ನನ್ನ ಅನುಮತಿಯನ್ನು ಸಹ ಪಡೆದಿರುವುದಿಲ್ಲ.

2)ಇಲ್ಲಿಯವರೆಗೆ ನನಗೆ ಪರಿಹಾರದ ಹಣವನ್ನು ಸಹ ನೀಡಿರುವುದಿಲ್ಲ.

ಈ ಮೇಲ್ಕಂಡ ತಮ್ಮ 2 ಪ್ರಶ್ನೆಗಳಿಗೆ ಸಂಬಂಧಿಸಿದಂತೆ ನಾವು ತಮಗೆ ತಿಳಿಸುವುದೇನೆಂದರೆ:-

ಹಗ್ಗದಿಹಳ್ಳಿ ಗ್ರಾಮದ ಹತ್ತಿರ ಇರುವ 41/ಪಿ ಸರ್ವೆ ನಂಬರಿನ ಜಮೀನು ದಿನಾಂಕ 08 ಜೂನ್ 2011ರಂದು ತಮ್ಮ ಹೆಸರಿಗೆ ನೋಂದಾಣಿಯಾಗಿರುತ್ತದೆ. ಆದರೆ ತಾಳಗುಪ್ಪ – ನೆಲಮಂಗಲ ಲಿಲೊ 400 kV ಲೈನಿನ ನಿರ್ಮಾಣದ ಕೆಲಸವು ಈ ದಿನಾಂಕಕ್ಕೆ ಮೊದಲೇ ಪೂರ್ಣಗೊಂಡಿದ್ದು ದಿನಾಂಕ 30 ಮೇ 2010 ರಂದು ಲೈನನ್ನು ಚಾರ್ಜ್ ಕೂಡ ಮಾಡಲಾಗಿರುತ್ತದೆ. ಈ ಕಾರಣದಿಂದಾಗಿ ತಮ್ಮ ಮೊದಲನೇ ಪ್ರಶ್ನೆಗೆ ಸಂಬಂಧಿಸಿದಂತೆ ಲೈನಿನ ನಿರ್ಮಾಣಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿಯನ್ನು ತಮಗೆ ತಿಳಿಸಲು ಸಾಧ್ಯವಿರುವುದಿಲ್ಲ ಮತ್ತು ತಮ್ಮ ಎರಡನೇ ಪ್ರಶ್ನೆಗೆ ಸಂಬಂಧಿಸಿದಂತೆ ನೀವು ದಿನಾಂಕ 08 ಜೂನ್ 2011 ರಂದು ಜಮೀನನ್ನು ಖರೀದಿಸಿದ್ದು ಇದಕ್ಕೂ ಮೊದಲೇ ತಾಳಗುಪ್ಪ – ನೆಲಮಂಗಲ ಲಿಲೊ 400 kV ಲೈನಿನ ನಿರ್ಮಾಣದ ಕಾಮಗಾರಿಯು ಪೂರ್ಣಗೊಂಡಿದ್ದು ಈ ನಿರ್ಮಾಣದ ಅವಧಿಯಲ್ಲಿ ಸರ್ವೆ ನಂಬರ್ 41/ಪಿ ಜಮೀನಿನ ಮಾಲೀಕರು ಬೇರೆಯವರಾಗಿದ್ದ ಕಾರಣ ತಾವು ಯಾವುದೇ ಪರಿಹಾರವನ್ನು ಕೇಳಲು ಅರ್ಹರಾಗಿರುವುದಿಲ್ಲ.

ಧನ್ಯವಾದಗಳೊಂದಿಗೆ

ತಮ್ಮ ವಿಶ್ವಾಸಿ

(ವಿ.ಜಯರಾಮ್
ಟಿ. ಎಲ್. ಎಮ್)